# 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

ಸಿ ಸಿ ನಂ. 551 / 2016

| | | |
|---|---|---|
| ಹೆಸರು | ಅಶೋಕ ರೆಡ್ಡಿ | PW 3 |
| ತಂದೆಯ ಹೆಸರು | ಸೋಮಶೇಖರ ರೆಡ್ಡಿ | |
| ವಯಸ್ಸು | 45 | |
| ಉದ್ಯೋಗ | ಎಚ್ ಸಿ 197 , ಸಂತೆ ಬೆನ್ನೂರು ಪೋಲಿಸ ಠಾಣೆ | ದಿನಾಂಕ 24.08.2018 |
| ವಾಸ | ಸಂತೆ ಬೆನ್ನೂರು | |
| ಮುಖ್ಯ ವಿಚಾರಣೆ ಸಸಅ ರವರಿಂದ | | |

(ಸಾಕ್ಷಿಯ ಹೇಳಿಕೆಯನ್ನು ಕಲಂ 299 ಸಿ ಆರ್ ಪಿ ಸಿ ರೀತ್ಯಾ ರೇಕಾರ್ಡ ಮಾಡಲಾಯಿತು.)

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ

ನಾನು ಮಲೆಬೆನ್ನೂರು ಪೋಲಿಸ ಠಾಣೆಯಲ್ಲಿ ಎಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನ್ಯಾಯಾಲಯದ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ದಿನಾಂಕ 23.01.2018 ರಂದು ದಾವಣಗೆರೆ ಜಿಲ್ಲೆ ಹರಿಹರ ನಗರದ ಅಗಸರ ಬೀದಿಯಲ್ಲಿರುವ ಮೂಲೆಮನೆ ಬಸರಾವಜಪ್ಪನವರ ಮನೆಯ ಹತ್ತಿರ ಪಂಚರಾದ ಶಬೀರ ತಂದೆ ಅಬ್ಬಾಸ ಹಾಗೂ ಬಸವರಾಜಪ್ಪ ತಂದೆ ಸಂಗಪ್ಪ ವಾಸ ನಗರ ಸಬೆ, ಬೀದಿ ಹರಿಹರ ರವರ ಸಮಕ್ಷಮ ಡಂಗುರ ಬಾರಿಸಿ ಹಾಗೂ ವಾರೆಂಟ್ ಅನ್ನು ಬೀದಿಗಳಲ್ಲಿ ಹಾಗೂ ಸದರಿ ಮನೆಯ ಮುಂದಿನ ಬಾಗಿಲಿಗೆ ಅಂಟಿಸಿ ಹಾಗೂ ಪುರಸಭೆಗೂ ಪತ್ರದ ಮೂಲಕ ತಿಳಿಸಿ ಪ್ರೋಕ್ಲೇಮೇಶನ್ ಅನ್ನು ಪ್ರಕಟಣೆ ಮಾಡಿರುತ್ತೇನೆ. ಆ ಸಮಯಕ್ಕೆ ಸಾಕ್ಷಿದಾರರಾದ ರಾಜು ತಂದೆ ಬಸವರಾಜಪ್ಪ, ಹಳ್ಳದ ಕೇರಿ ಹರಿಹರ ಹಾಗೂ ದಾದಾಪೀರ ತಂದೆ ಜಮಾಲಸಾಬ 45 ವರ್ಷ, 1 ನೇ ಮುಖ್ಯ ರಸ್ತೆ , 1 ನೇ ಅಡ್ಡ ರಸ್ತೆ , ಇಂದಿರಾ ನಗರ ಹರಿಹರ ಇವರ ಹೇಳಿಕೆಗಳನ್ನು ಸಹ ಪಡೆದುಕೊಂಡಿರುತ್ತೇನೆ. ಅಕ್ಕ ಪಕ್ಕ ಎಲ್ಲರನ್ನೂ ವಿಚಾರಿಸಲಾಗಿ ಈ ಪ್ರಕರಣದ ಆರೋಪಿತರಾದ ರಮೇಶಸಾ , ಕೌಶಲ್ ಕುಮಾರ , ರಂಜಿತ ಕುಮಾರ ಹಾಗೂ ಮಿತಲೇಶ ಕುಮಾರ ರವರು ಎಲ್ಲಿದ್ದಾರೆ ಎಂಬುದು ಯಾರಿಗೂ ಗೊತ್ತಿಲ್ಲ ಎಂಬುದು ಕಂಡುಬಂತು. ಸದರಿ ಆರೋಪಿತರು ಮೇಲೆ ಹೇಳಿದ ವಿಳಾಸದಲ್ಲಿ ಬಾಡಿಗೆಗೆ ಇದ್ದು 2 ವರ್ಷಗಳ ಹಿಂದೆಯೇ ಖಾಲಿ ಮಾಡಿಕೊಂಡು ಹೋಗಿರುತ್ತಾರೆ ಎಂದು ತಿಳಿದು ಬಂತು. ಅವರು ಎಲ್ಲಿದ್ದಾರೆ ಎಂದು ಯಾರಿಗೂ ಗೊತ್ತಿಲ್ಲ ಎಂದು ಅಕ್ಕ ಪಕ್ಕದ ಜನರು ತಿಳಿಸಿದರು.

ಆ ಕಾಲಕ್ಕೆ ದಿನಾಂಕ 23.01.2018 ರಂದು ನಾನು ಒಂದು ಪಂಚನಾಮೆಯನ್ನು ಜರುಗಿಸಿ ಅದಕ್ಕೆ ಪಂಚರಾದ ಶಬೀರ ಹಾಗೂ ಬಸವರಾಜಪ್ಪ ರವರ ಸಹಿಯನ್ನು ಪಡೆದಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ 8 ಎಂದು, ಅದರಲ್ಲಿರುವ ಸಾಕ್ಷಿಯವರ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಪೋಟೋವನ್ನು ಸಹ ತೆಗೆದಿರುತ್ತೇನೆ ಸದರಿ ಪೋಟೋವನ್ನು ನಿಪಿ 9 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಹೇಳಿಕೆಗಳನ್ನು ಸಹ ನನ್ನ ವರದಿಯ ಜೊತೆ ಸಲ್ಲಿಸಿರುತ್ತೇನೆ. ಹರಿಹರ ತಹಶೀಲ್ದಾರ ರವರು ದಿನಾಂಕ 16.01.2018 ರಂದು ನಮ್ಮ ಠಾಣೆಯ ಪಿ ಎಸ್

ಐ ರವರಿಗೆ ಪತ್ರ ಬರೆದು ಅದರಲ್ಲಿ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಯವರ ವರದಿಯ ಆಧಾರದ ಮೇಲೆ ಈ ಪ್ರಕರಣದ ಆರೋಪಿತರ ಹೆಸರಿಗೆ ಯಾವುದೇ ಚರ ಹಾಗೂ ಸ್ಥಿರ ಆಸ್ತಿಗಳು ಇರುವುದಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯ ದೃಡಿಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಅದನ್ನು ನಿಪಿ 10 ಎಂದು ಗುರುತಿಸಲಾಯಿತು. ಆರೋಪಿತರು ಹರಿಹರದಲ್ಲಿ ವಾಸವಾಗಿರುವುದಿಲ್ಲ ಹಾಗೂ ಎಲ್ಲಿದ್ದಾರೆ ಎಂಬುದು ತಿಳಿದು ಬಂದಿರುವುದಿಲ್ಲ.

ಪಾಟಿಸವಾಲುಃ ಆರೋಪಿ ಪರ ವಕೀಲರಿಂದ – ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

ನ್ಯಾಯಿಕ ದಂಡಾಧಿಕಾರಿಗಳು, ಹರಿಹರ